ಅಧ್ಯಕ್ಷರು: ನೋಡಿ, ಚರ್ಚೆಗೆ ಅವಕಾಶವಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಅದನ್ನು ಪ್ರಸ್ತಾಪಿಸಿದ್ದರಿಂದ ಅವರಿಗೆ ಅವಕಾಶ ಕೊಟ್ಟಿದ್ದೇನೆ. ಅವರು ವಿಚಾರ ಹೇಳಿದ್ದಾರೆ. ಇನ್ನು 2-3 ಗಂಟೆಗಳಷ್ಟು ಮಾತ್ರ ಇದೆ. ದಯಮಾಡಿ ತಾವೆಲ್ಲರೂ ಸಹಕರಿಸಬೇಕು. ಕುಳಿತುಕೊಳ್ಳಿ.

ಶ್ರೀ ಬಾಲಚಂದ್ರ ಜಾರಕಿಹೊಳಿ: ಸನ್ಮಾನ್ಯ ಅಧ್ಯಕ್ಷರೆ, ನನ್ನ ಇಲಾಖೆಗೆ ಸಂಬಂಧಿಸಿದಂತೆ ಒಂದು ಪ್ರಕಟಣೆ ಕೊಡುತ್ತಿದ್ದೇನೆ.

ಅಧ್ಯಕ್ಷರು: ಹೇಳಿಕೆ ಕೊಡಿ.

ಶ್ರೀ ಜೆ.ಸಿ.ಮಾಧುಸ್ವಾಮಿ: ನಾವು ಯಾರೂ ಮಾತನಾಡಬಾರದೆಂದರೆ, ಬರೆದು ಕಳುಹಿಸಿಕೊಡಿ, ಓದಿಕೊಳ್ಳುತ್ತೇವೆ. ನಾವ್ಯಾರೂ ಮಾತನಾಡಬಾರದೆಂದರೆ, ಅದನ್ನು ಹಾಗೇ ಕೊಡಿಸಿಬಿಡಿ. ಹೇಳಿಕೆ ಮಾಡುವುದು ನಾವು ಪ್ರತಿಕ್ರಿಯೆ ಮಾಡಲಿ ಎಂದು, ಅದಕ್ಕೂ ನೀವು ಅವಕಾಶ ಕೊಡುವುದಿಲ್ಲವೆಂದರೆ....

ಅಧ್ಯಕ್ಷರು: ಈಗ ಹೇಳಿಕೆ ಮಾಡುತ್ತಾರೆ. ಅದರ ಮೇಲೆ ಚರ್ಚೆಗೆ ಅವಕಾಶವಿಲ್ಲ. ನಿಯಮಾವಳಿ ಪ್ರಕಾರ ಚರ್ಚೆಗೆ ಅವಕಾಶವಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ: ಹೇಳಿಕೆ ಮಾಡಿದ ನಂತರ ಮಾತನಾಡಬಾರದೆಂದು ನಾವು ಕುಳಿತಿದ್ದೆವು. ಪ್ರತಿಕ್ರಿಯೆಯನ್ನೂ ವ್ಯಕ್ತಪಡಿಸಬಾರದೆಂದರೆ ಹೇಗೆ?

ಅಧ್ಯಕ್ಷರು: ಚರ್ಚೆಗೆ ಅವಕಾಶವಿಲ್ಲ. ನೀವು ಹಿರಿಯ ಸದಸ್ಯರು, ನಿಯಮಾವಳಿ ಗೊತ್ತಿದೆ. ನೀವೇ ಈ ರೀತಿ ಮಾಡಿದರೆ ಹೇಗೆ?

ಶ್ರೀ ಜೆ.ಸಿ. ಮಾಧುಸ್ವಾಮಿ: ಹೇಳಿಕೆ ಮೇಲೆ ಹಾಗೇ ಹೋಗುವುದಕ್ಕಾಗುತ್ತದೆಯೇ?

ಅಧ್ಯಕ್ಷರು: ಒಂದು ಸಲ ಹೇಳಿದ ನಂತರ ಮತ್ತೆ ಮತ್ತೆ ಈ ರೀತಿ ಮಾಡಬಾರದು, ದಯಮಾಡಿ ತಾವು ಸಹಕರಿಸಬೇಕು. ನೀವು ಹಿರಿಯ ಸದಸ್ಯರು, ನೀವೇ ಚೇರ್ ಜೊತೆ ಕೋ-ಆಪರೇಟ್ ಮಾಡದಿದ್ದರೆ ಇನ್ನಾರು ಮಾಡುತ್ತಾರೆ?

(ಆ) 2006-07ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಕೊಡುವ ಬಗ್ಗೆ

ಶ್ರೀ ಬಾಲಚಂದ್ರ ಲ.ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು): ಸಮಾಜ ಕಲ್ಯಾಣ ಇಲಾಖೆಯಡಿ ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡದ ಮಾಧ್ಯಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ನೀಡುತ್ತಿದ್ದ ವಿದ್ಯಾರ್ಥಿ ವೇತನಕ್ಕೆ ಪ್ರಸಕ್ತ ಸಾಲಿನಲ್ಲಿ ಅವಕಾಶ ಕಲ್ಪಿಸಿರುವುದಿಲ್ಲ. ಈ ಯೋಜನೆಯನ್ನು ಮುಂದುವರೆಸಿಕೊಂಡು ಹೋಗುವ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಕಳುಹಿಸಲಾಗಿ, ಆರ್ಥಿಕ ಇಲಾಖೆಯು ಈ ಯೋಜನೆಯನ್ನು ಮುಂದುವರೆಸಲು ಸಹಮತಿಸಿ ರೂ.999.508 ಲಕ್ಷಗಳ ಅನುದಾನವನ್ನು ಒದಗಿಸಲು ಒಪ್ಪಿಗೆ ನೀಡಿರುತ್ತದೆ. ಈ ಮೂಲಕ ವಿದ್ಯಾರ್ಥಿ ವೇತನ ನೀಡುವ ಯೋಜನೆಯನ್ನು ಮುಂದುವರೆಸಲಾಗಿದೆ". ಈ ಯೋಜನೆಯನ್ನು ಮುಂದುವರೆಸಲು ಸರ್ಕಾರ ಇಚ್ಛಿಸುತ್ತದೆ. ಏಕೆಂದರೆ, ಈಗಾಗಲೇ ಒಂದು ಪತ್ರಿಕೆಯಲ್ಲಿ ಬಂದಿದೆ. ಇನ್ನು ಮುಂದೆ 2006-07ನೇ

ಸಾಲಿನಲ್ಲಿ ಪರಿಶಿಷ್ಟ ಜಾತಿ/ ಜನಾಂಗದ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಕೊಡುವುದಕ್ಕಾಗುವುದಿಲ್ಲ. ಸರ್ಕಾರ ಆ ರೀತಿ ಆದೇಶ ಕೊಟ್ಟಿದೆ ಎಂಬ ಸಂದೇಶ ಇಡೀ ಕರ್ನಾಟಕ ರಾಜ್ಯದ ತುಂಬಾ ಒಂದು ಸಂದೇಶ ಹೋಗಿತ್ತು. ಅದಕ್ಕೋಸ್ಕರ, ಎಲ್ಲಾ ಮಾನ್ಯ ಸದಸ್ಯರ ಗಮನಕ್ಕೆ ತರಲು ಇಚ್ಛೆಪಡುತ್ತೇನೆ. ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳೊಂದಿಗೆ ಚರ್ಚೆ ಮಾಡಿ ಹಣಕಾಸು ಇಲಾಖೆಯು ಒಪ್ಪಿಗೆ ಕೊಟ್ಟಿದೆ. ಅದಕ್ಕೆ 2006–07ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಸರ್ಕಾರ ಕೊಡುತ್ತಿದೆಯೆಂದು ತಮ್ಮ ಮೂಲಕ ತಿಳಿಸುತ್ತಿದ್ದೇನೆ.

7. ವಿತ್ತೀಯಕಾರ್ಯಕಲಾಪ

(ಅ) 2006–07ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಚರ್ಚೆ

ಅಧ್ಯಕ್ಷರು: ಈಗ ಬೇಡಿಕೆಗಳು ಮಂಡನೆಯಾಗಿರುವುದರಿಂದ ಸದಸ್ಯರಾದ ಶ್ರೀ ಶ್ರೀನಿವಾಸಗೌಡರು ಮಾತನಾಡಬೇಕು.

(ಆ) ಇಲಾಖೆಗಳ ನಿರ್ವಹಣಾ ಮುಂಗಡ ಪತ್ರ ಒದಗಿಸದೇ ಇರುವ ಬಗ್ಗೆ

ಶ್ರೀ ಎಸ್.ಎಸ್.ಪಾಟೀಲ್: ಬೇಡಿಕೆಗಳು ಮಂಡನೆಯಾಗಿದ್ದರೂ 2006–07ನೇ ಸಾಲಿಗೆ ಸಂಬಂಧಿಸಿದಂತೆ ಶಿಕ್ಷಣ ಇಲಾಖೆ ಹೊರತುಪಡಿಸಿ ಬೇರಾವುದೇ ಇಲಾಖೆಯ ನಿರ್ವಹಣಾ ಮುಂಗಡಪತ್ರ ನಮಗೆ ಬಂದಿರುವುದಿಲ್ಲ. ಮತ್ತೇನು ಚರ್ಚೆ ಮಾಡುವುದು? 2005–06ನೇ ಸಾಲಿನ ವಾರ್ಷಿಕ ವರದಿಗಳನ್ನು ಕಳುಹಿಸಿದ್ದಾರೆ. ಏನು ಮಂಡನೆ ಇದು? ಒಂದು ಇಲಾಖೆಯ ನಿರ್ವಹಣಾ ಮುಂಗಡ ಪತ್ರಗಳು ಬಂದಿಲ್ಲ. ವರ್ಷದಲ್ಲಿ ಯಾವ್ಯಾವ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ? ಏನೇನು ಸಾಧಿಸಲಾಗಿದೆ? ದುಡ್ಡು ಎಲ್ಲಿದೆ? ಇದ್ಯಾವುದರ ಬಗ್ಗೆಯೂ ಮಾಹಿತಿ ನೀಡದೆ ಸುಮ್ಮನೆ ಬಜೆಟ್ ಮೇಲೆ ಮಾತನಾಡಿ ಎಂದರೆ, ಇದಕ್ಕೆ ಏನು ಅರ್ಥವಿದೆ? ಯಾವ ಇಲಾಖೆಯದನ್ನೂ ಕೊಟ್ಟಿಲ್ಲ. ಕೇವಲ ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ಮಾತ್ರ ಇವೊತ್ತು ಬೆಳಗ್ಗೆ ಬಂದಿದೆ. ಶಿಕ್ಷಣ ಇಲಾಖೆ ಹೊರತುಪಡಿಸಿದರೆ, ಯಾವ ಇಲಾಖೆಯ ನಿರ್ವಹಣಾ ಮುಂಗಡ ಪತ್ರಗಳು ಪ್ರಿಂಟ್ ಆಗಿಲ್ಲವೆಂದು ಹೇಳುತ್ತಾರೆ.

ಅಧ್ಯಕ್ಷರು: ಮಾನ್ಯ ಪಾಟೀಲರಿಗೆ ಹೇಳುವುದೇನೆಂದರೆ, ಸರ್ಕಾರದ ಮುಖ್ಯ ಕಾರ್ಯದರ್ಶಿಯವರನ್ನು ಕರೆಸಿ ಈ ತರಹ ನಿರ್ವಹಣಾ ಮುಂಗಡ ಪತ್ರಗಳು ಸಕಾಲಕ್ಕೆ ಸರಿಯಾಗಿ ಬಂದು ಮುಟ್ಟುತ್ತಿಲ್ಲ. ನೀವು ಎಲ್ಲಾ ಇಲಾಖಾ ಕಾರ್ಯದರ್ಶಿಯವರಿಗೆ ಸೂಚನೆ ಕೊಡಬೇಕು. ಮತ್ತು ಸಮಯಕ್ಕೆ ಸರಿಯಾಗಿ ಒದಗಿಸಿಕೊಡಬೇಕೆಂಬ ವಿನಂತಿಯನ್ನು ನಾನು ಹಿಂದೆ ಮೀಟಿಂಗ್ ಕರೆದು ತಿಳಿಸಿದ್ದೇನೆ. ಆದರೆ, ಯಾವುದೂ ಬಂದಿರುವುದಿಲ್ಲ. ಸೆಕ್ರಟೇರಿಯಟ್‌ರವರು ಕಳುಹಿಸಿದ್ದಾರೆ. ನಿವು ಈಗ ಬಂದಿಲ್ಲವೆಂದು ಹೇಳುತ್ತಿರುವುದು ಯಾವುದೆಂದು ನನಗೆ ಗೊತ್ತಿಲ್ಲ. ಅದಕ್ಕೆ ಸರ್ಕಾರದವರು ಅದರ ಬಗ್ಗೆ ಸ್ವಲ್ಪ ವಿಚಾರ ಮಾಡಬೇಕು.

ಶ್ರೀ ನೆ.ಲ. ನರೇಂದ್ರಬಾಬು: ಸರ್ಕಾರ ಎಷ್ಟು ನಿಷ್ಕ್ರಿಯವಾಗಿದೆಯೆಂದು ಗೊತ್ತಾಗುತ್ತದೆ.